# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE
REACHING NATIONS

**India's National Spiritual Newspaper**

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXV | JANUARY 2024 | No. 12


## ಪರಿಶುದ್ಧ ಸತ್ಯವೇದ

ದಯಮಾಡಿ ಈ ಕೆಳಗಿನ ವಚನಗಳನ್ನು ಕಂಠಪಾಠ ಮಾಡಿರಿ.

ಯೆರಮಿಯ 31:23-28

23. ಇಸ್ರಾಯೇಲಿನ ದೇವರೂ ಸೇನಾಧೀಶ್ವರನೂ ಆದ ಯೆಹೋವನು ಇಂತೆನ್ನುತ್ತಾನೆ ನಾನು ನನ್ನ ಜನರ ದುರವಸ್ಥೆಯನ್ನು ತಪ್ಪಿಸುವಾಗ ಯೆಹೂದ ದೇಶದಲ್ಲಿಯೂ ಅವರ ಪಟ್ಟಣಗಳಲ್ಲಿಯೂ ನ್ಯಾಯದ ನಿವಾಸವೇ, ಪರಿಶುದ್ದ ಪರ್ವತವೇ, ಯೆಹೋವನು ನಿನ್ನನ್ನು ಆಶೀರ್ವದಿಸಲಿ ಎಂದು ಮತ್ತೆ ಮಾತಾಡುವರು.

24. ಆ ಸಕಲ ಪಟ್ಟಣಗಳವರು, ವ್ಯವಸಾಯ ಗಾರರು, ಮುಂದೆ ಮೇಯಿಸುತ್ತಾ ದೇಶದಲ್ಲಿ ಸಂಚರಿಸುವವರು, ಅಂತು ಯೆಹೂದ್ಯರೆಲ್ಲರೂ ಅಲ್ಲಿ ಒಟ್ಟಿಗೆ ವಾಸಿಸುವರು.

25. ನಾನು ಬಳಲಿದವರನ್ನು ತಂಪುಗೊಳಿಸಿ ಕುಂದಿದವರೆಲ್ಲರನ್ನೂ ತೃಪ್ತಿಪಡಿಸುವೆನಷ್ಟೆ.

26. (ಇದಾದ ಮೇಲೆ ನಾನು ಎಚ್ಚತ್ತ್ತು ನಿಜಸ್ಥಿತಿಯನ್ನು ನೋಡಿದೆನು; ಆಗ ನನ್ನ ಕನಸು ನನಗೆ ಮನೋಹರವಾಗಿ ಕಾಣಿಸಿತು).

27. ಯೆಹೋವನು ಇಂತೆನ್ನುತ್ತಾನೆ ಇಗೋ, ನಾನು ಇಸ್ರಾಯೇಲ್ ಯೆಹೂದ ಕ್ಷೇತ್ರಗಳಲ್ಲಿ ಮನುಷ್ಯರನ್ನೂ ಪಶುಗಳನ್ನೂ ಬಿತ್ತುವ ದಿನಗಳು ಬರುವವು.

28. ನಾನು ಮೊದಲು ಇವರನ್ನು ಕಿತ್ತು ಹಾಕಲು, ಕೆಡವಲು, ಹಾಳು ಮಾಡಲು, ನಾಶ ಮಾಡಲು, ಬಾಧಿಸಲು ಹೇಗೆ ಎಚ್ಚರ ಗೊಂಡಿದ್ದೆನೋ ಹಾಗೆಯೇ ಇನ್ನು ಮೇಲೆ ಇವರನ್ನು ಕಟ್ಟಲು, ನೆಡಲು ಎಚ್ಚರ ಗೊಳ್ಳುವೆನು, ಇದು ಯೆಹೋವನ ನುಡಿ.

## ನೀನು ನನ್ನ ಒಳ್ಳೆತನದಿಂದ ತೃಪ್ತರಾಗುತ್ತೀರಿ !

### ಯೆಹೋವನು ಹೀಗನ್ನುತ್ತಾನೆ. ಯೆರಮೀಯ 31:14.

**YOU SHALL BE SATISFIED WITH MY GOODNESS! says the Lord - Jeremiah 31:14.**

**2024 ರಲ್ಲಿ ತಮ್ಮ ಜೀವನದಲ್ಲಿ ಏನಾಗುತ್ತದೆ ಎಂದು ತಿಳಿಯಲು ಉತ್ಸುಕರಾಗಿರುವ ತನ್ನ ಮಕ್ಕಳಿಗೆ ದೇವರು ಈ ಸಂದೇಶದ ಮೂಲಕ ಸಂವಾದ ಮಾಡುತ್ತಾನೆ. ದಯಮಾಡಿ ಎಚ್ಚರಿಕೆಯಿಂದ ಓದಿರಿ !**

***ಮುಖ್ಯ ಸಂಪಾದಕರು ಫಾಸ. ಎಂಜೆಲಿನ್ ಸೆಲ್ವಕುಮಾರಿ.***



ನಮ್ಮ ಆತನ **ಕರೆಯ ಪ್ರತಿಧ್ವನಿ**ಯ ಕುಟುಂಬದ ಎಲ್ಲಾ ಸದಸ್ಯರಿಗೆ ಸಂತೋಷ ಮತ್ತು ಆಶೀರ್ವದಿಸಲ್ಪಟ್ಟ ಹೊಸವರ್ಷದ ಶುಭಾಶಯಗಳು !

ನಮ್ಮ ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಳ ಕಡೆಗೆ ನಿಮ್ಮ ನಿರಂತರವಾದ ಸಹಕಾರಕ್ಕಾಗಿ ನಿಮಗೆ ತುಂಬಾ ಧನ್ಯವಾದಗಳು. ಆತನ ಎಲ್ಲಾ ಒಳ್ಳೆಯ ತನಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಲು ದೇವರು ನಮಗೆ ಇನ್ನೊಂದು ವರ್ಷವನ್ನು ದಯೆಯಿಂದ ಆಶೀರ್ವದಿಸಿದ್ದಾನೆ. ಪ್ರಪಂಚದ್ಯಾಂತಹ ಸಾವಿರಾರು ಜನರನ್ನು ತಲುಪುವಂತೆ ನಿಮ್ಮ ಆಸಕ್ತಿಯುಳ್ಳ ಪ್ರಾರ್ಥನೆ ಮತ್ತು ಪ್ರೀತಿಯ

(3ನೇ ಪುಟಕ್ಕೆ)




**Echo of His Call**

***Christian YouTube Channel!***

**An opportunity to pray with Pr. S. Sam Selva Raj!**

Message & Prayer in 5 minutes!!

**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**



# ECHO OF HIS CALL - (1969-2019 GOLDEN JUBILEE YEAR)

REACHING NATIONS

## *from your dearly beloved brother...*

ನಿನ್ನ ಕೃಪೆಯಿಂದ ಸಂವತ್ಸರಕ್ಕೆ ಸುಭಿಕ್ಷ ಕಿರೀಟವನ್ನು ಇಟ್ಟಿದ್ದೀ; ನೀನು ಹಾದು ಹೋಗುವ ಮಾರ್ಗದಲ್ಲೆಲ್ಲಾ ಸಮೃದ್ಧಿಕರವಾದ ವೃಷ್ಟಿಯು ಸುರಿಯುವುದು.

(ಕೀರ್ತನೆ 65:11)




**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.

**HON. EDITOR-IN-CHIEF**

Rev. Angeline S. Kumari, M.A., M.Sc., M.Ed.

**MANAGING EDITOR**

Pastor Alex Samson Sam, B.Th., M.Div.

**GENERAL MANAGER**

Bro. N. Prakasam, M.A., M.Sc.(C&P), PGDHRM, MBA.

**ADMINISTRATION**

Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)

**EDITORIAL BOARD**

Dr. Serena Bevin, M.A., M.Phil., B.Ed.
Sis. Sajini Cherian
Sis. L. Mariya Anjalin, M.A., M.Sc., B.Ed.
Rev. Dr. K.R. Rajasekaran



**EDITOR, PUBLISHER & PRINTER**

Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858
95661 31858

**E.MAIL ID**

sam@echoofhiscall.org
biblecor@yahoo.co.in

**WEBSITES**

www.echoofhiscall.org
www.stpaulsmatriculation.com

**YOUTUBE CHANNEL**

Echo of His Call


ಕರ್ತನಲ್ಲಿ ಪ್ರೀತಿಯುಳ್ಳ ಸಹೋದರ ಮತ್ತು ಸಹೋದರಿಯರೇ,

**ಯೇಸುಕ್ರಿಸ್ತನ ರಕ್ತದಿಂದ ಪ್ರೋಕ್ಷಿತ ರಾಗುವದಕ್ಕೂ ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆರಿಸಿಕೊಳ್ಳಲ್ಪಟ್ಟವರಿಗೆ ಬರೆಯುವದೇನಂದರೆ ನಿಮಗೆ ಕೃಪೆಯೂ ಶಾಂತಿಯೂ ಹೆಚ್ಚಿಚ್ಚಾಗಲಿ.** 1 ಪೇತ್ರ 1:2.

ಈ ಸಂಪಾದಕರ ಭಾಗವನ್ನು ಬರೆಯುವ ಸದಾವಾಕಾಶವನ್ನು ಕೊಟ್ಟ ದೇವರಿಗೆ ನಾನು ಕೃತಜ್ಞತೆಯುಳ್ಳವನಾಗಿದ್ದೇನೆ. ನನ್ನ ತಂದೆಯಾದ ಪಾ. ಸ್ಯಾಮ್ ಸೆಲ್ವರಾಜ್‌ರವರು ಪ್ರಯಾಣ ಮತ್ತು ಇತರ ಸೇವೆಗಳ ಕರ್ತವ್ಯಗಳಲ್ಲಿ ಹೆಚ್ಚು ಆಕ್ರಮಿಸಿಕೊಂಡಿದ್ದಾರೆ, ಅದ್ದರಿಂದ ಅವರು ಈ ಕೆಲಸವನ್ನು ನನಗೆ ವಹಿಸಿದ್ದಾರೆ. ನಾನು ನಿಮ್ಮ ಪ್ರೀತಿಗಾಗಿ ಮತ್ತು ಅನೇಕ ದಶಕಗಳಿಂದ ನಮ್ಮೊಂದಿಗೆ ಇರುವ ಪಾಲುಗಾರಿಕೆಗಾಗಿ ನಿಮಗೆ ನಾನು ಪ್ರಾಮಾಣಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.



*Pr. Alex Samson Sam*
*Managing Editor*

2023 ರ ಡಿಸೆಂಬರ್ ತಿಂಗಳಲ್ಲಿ, ಹಲವಾರು ತಲುಪದೇ ಇರುವ ವ್ಯಕ್ತಿಗಳನ್ನು ತಲುಪಲು ಕರ್ತನು ನಮಗೆ ಅದ್ಭುತ ಅವಕಾಶಗಳನ್ನು ನೀಡಿದ್ದಾನೆ. ನಮ್ಮ ಹೊಸ ವರ್ಷದ ಆರಾಧನೆಗಳು ದೇವರ ಆಶೀರ್ವಾದಗಳಿಂದ ತುಂಬಿದ್ದವು. ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ 2024 ವರ್ಷವು ಕೂಡ ಹೆಚ್ಚು ಫಲಭರಿತವಾದ ಆಶೀರ್ವಾದಗಳನ್ನು ತರುತ್ತದೆ ಎಂದು ನಮಗೆ ಬಲವಾದ ನಂಬಿಕೆ ಇದೆ.

ನಾವು ನಿಮಗಾಗಿ ಅನುದಿನವು ಪ್ರಾರ್ಥನೆ ಮಾಡುತ್ತೇವೆ ಮತ್ತು ನಮ್ಮ ಆತನ **ಕರೆಯ ಪ್ರತಿಧ್ವನಿಯ ಯುಟ್ಯೂಬ್ ಚಾನೆಲ್** ಮೂಲಕ ಅನುದಿನದ ಧ್ಯಾನಗಳನ್ನು ನಿಮ್ಮೊಂದಿಗೆ ಇಂಗ್ಲೀಷ್, ತಮಿಳು, ಹಿಂದಿ ಮತ್ತು ತೆಲುಗುನಲ್ಲಿ ಹಂಚಿ ಕೊಳ್ಳುತ್ತೇವೆ. ಬೇರೆ ಭಾಷೆಗಳಿಗೆ ಕೂಡ ನಾವು ವಿಸ್ತರಿಸುವದಕ್ಕೆ ನಾವು ಆಸೆಯುಳ್ಳವರಾಗಿದ್ದೇವೆ. ಆತನ **ಕರೆಯ ಪ್ರತಿಧ್ವನಿಯ** ಸೇವೆಗಳು ಬೆಳೆಯುವಂತೆ ನಾವು ನಿಮ್ಮನ್ನು ಆಸಕ್ತಿಯಿಂದ ಆಸಕ್ತಿಯುಳ್ಳವರಾಗಿ ಪ್ರಾರ್ಥನೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.



*Nehemiah Bible College Key Leaders*


**Our Ministries:** ECHO OF HIS CALL Monthly Magazines (16 languages) ◘ BIBLECOR - Postal Courses (3 languages) ◘ YouTube Ministry ◘ Online Courses ◘ Theological Correspondence Courses (2 languages) ◘ Church Planting ◘ Nehemiah Bible Colleges ◘ Gospel Printing Press ◘ Great Commission Partners ◘ St. Paul's Matriculation School ◘ Crusades ◘ Community Development

ಆತನ **ಕರೆಯ ಪ್ರತಿಧ್ವನಿಯ ಸೇವೆ**ಗಳಿಗಾಗಿ ನಿಮ್ಮ ಸಹಕಾರ ಮತ್ತು ಪ್ರಾರ್ಥನೆಗಳಿಗಾಗಿ ನಾವು ಆಳವಾಗಿ ನಿಮ್ಮನ್ನು ಅಭಿನಂದಿಸುತ್ತೇವೆ. ಈ ನಿಟ್ಟಿನಲ್ಲಿ, ನಮ್ಮ **ನೆಹಮೀಯ ಸತ್ಯವೇದ ಕಾಲೇಜಿನ** ಬಗ್ಗೆ ನೆನಪಿಸಲು ನಾವು ಬಯಸುತ್ತೇವೆ. ಈಗ ಸದ್ಯಕ್ಕೆ ತರಗತಿಗಳು ತಮಿಳು ಮತ್ತು ಹಿಂದಿಯಲ್ಲಿ ನಡೆಸಲಾಗುತ್ತದೆ. ನಾವು ಹೊಸವರ್ಷಕ್ಕೆ ಪ್ರವೇಶ ಮಾಡುವಾಗ, ಈ ಕಾಲೇಜಿನಲ್ಲಿ ಅಂಗ್ಲಭಾಷೆಯಲ್ಲಿ ಕೂಡ ತರಗತಿಗಳನ್ನು ವಿಸ್ತರಿಸುವ ಯೋಜನೆಯಲ್ಲಿ ಇದ್ದೇವೆ. ನಾವು ಗೌರವಾನ್ವಿತ ಮಾನ್ಯತೆ ಸಂಸ್ಥೆ **ಎಸಿಯಾ ಥಿಯಲಾಜಿಕಲ್ ಅಸೋಸಿಯೇಸನ್**ನಿಂದ ಮಾನ್ಯತೆ ಪಡೆಯುವ ಅಂತಿಮ ಹಂತದಲ್ಲಿದ್ದೇವೆ ಎಂದು ಘೋಷಿಸಲು ನಾವು ರೋಮಾಂಚನ ಗೊಂಡಿದ್ದೇವೆ. ಆ ಸಂಸ್ಥೆಯಿಂದ ಈಗಾಗಲೇ ನಾವು ಸದಸ್ಯರ ಪಾರಂನ್ನು ಪಡೆದುಕೊಂಡಿದ್ದೇವೆ. **ನೆಹಮೀಯ ಸತ್ಯವೇದ ಕಾಲೇಜನ್ನು** ಇನ್ನೊಂದು ಹಂತಕ್ಕೆ ತೆಗೆದುಕೊಂಡು ಹೋಗುವದಕ್ಕೆ ನಮ್ಮ ಎಲ್ಲಾ ಜೊತೆ ಕೆಲಸಗಾರರು ಪರಿಣಾಮಕಾರಿಯಾಗಿ ಕೆಲಸ ಮಾಡು ವಂತೆ ದಯಮಾಡಿ ಅವರಿಗಾಗಿ ಪ್ರಾರ್ಥನೆ ಮಾಡಿರಿ.

ಅದೇ ರೀತಿಯಾಗಿ, ದಯಮಾಡಿ ನಿರಂತರ ವಾಗಿ ನಮ್ಮ ಎಲ್ಲಾ ಸೇವೆಗಳಿಗಾಗಿ ಪ್ರಾರ್ಥನೆ ಮಾಡಿರಿ. ಆತನ **ಕರೆಯ ಪ್ರತಿಧ್ವನಿ**ಯ ಸೇವೆಗಳು, 16 ಭಾಷೆಗಳಲ್ಲಿ ತಿಂಗಳ ಮಾಸಪತ್ರಿಕೆ, ಅನೇಕ ಭಾಷೆಯ ಸಭೆಗಳು, **ಬೈಬಲ್ ಕೋರ್ ದೂರ ಶಿಕ್ಷಣ ಕೋರ್ಸ್‌ಗಳು, ದೈವಶಾಸ್ತ್ರ ದೂರ ಶಿಕ್ಷಣ ಕೋರ್ಸ್‌ಗಳು, ಸಂತ ಪೌಲ ಮೇಟ್ರಿಕೇಲ್ಯುಷನ್ ಶಾಲೆ,** ಸುವಾರ್ತೆ ಮುದ್ರಣ ಮತ್ತು ಬೇರೆ ಸೇವೆಗಳು.

**ಯೆಹೋವನು ನಿಮ್ಮನ್ನು ಆಶೀರ್ವದಿಸಿ ಕಾಪಾಡಲಿ; ಯೆಹೋವನು ಪ್ರಸನ್ನ ಮುಖದಿಂದ ನಿಮ್ಮನ್ನು ನೋಡಿ ನಿಮ್ಮ ಮೇಲೆ ದಯವಿಡಲಿ. ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ.** ಅರಣ್ಯಕಾಂಡ 6:2-25.

**ಕ್ರಿಸ್ತ ಯೇಸುವಿನಲ್ಲಿ ನಿಮ್ಮ ಸೇವಕರುಗಳು,**

**ಅಲೆಕ್ಸ್ ಸ್ಯಾಮುಸನ್ ಸ್ಯಾಮ್**
**ಪಾ. ಎಸ್. ಸ್ಯಾಮ್ ಸೆಲ್ವರಾಜ್ ಮತ್ತು**
(+91) 98412 71858 / 98410 71858,
E.mail : sam@echoofhiscall.org

*(1ನೇ ಪುಟದಿಂದ)*

ಕಾಣಿಕೆಗಳಿಂದ ಸಾಧ್ಯವಾಯಿತು. ನಾವು ನಿಮಗೆ ಯಾವಾಗಲೂ ಕೃತಜ್ಞತೆಯುಳ್ಳವ ರಾಗಿದ್ದೇವೆ. ದೇವರು ನಿಮ್ಮನ್ನು ಮಾತ್ರವಲ್ಲದೆ ಮತ್ತು ನಿಮ್ಮ ಮುಂದೆ ಬರುವ ಸಂತತಿಗೆ ನಿಮ್ಮ ಸಮಯವನ್ನು ಹೂಡಿಕೆ ಮಾಡಿದ್ದೀರಿ ಮತ್ತು ನಿಮ್ಮ ಕಣ್ಣೀರಿನ ಪ್ರಾರ್ಥನೆಯಿಂದ ನೀರಿಕ್ಷೆಯ ಸಂದೇಶವನ್ನು ಈ ಲೋಕಕ್ಕೆ ಪ್ರಸರಿಸಲು ಸಾಧ್ಯ ವಾಯಿತು ಅದಕ್ಕೆ ದೇವರು ನಿಶ್ಚಯವಾಗಿ ಆಶೀರ್ವದಿಸುವನು. ಇದು ತನ್ನ ಜನರಿಗೆ ದೇವರ ವಾಗ್ದಾನವಾಗಿದೆ. ಈ ದೊಡ್ಡ ಕೆಲಸವನ್ನು ನಿರಂತರವಾಗಿ ಮಾಡುವದಕ್ಕೆ ಬನ್ನಿ ನಾವೆಲ್ಲರೂ ಕೈಗಳನ್ನು ಜೋಡಿಸೋಣ!.

ಈ ವರ್ಷ ದೇವರ ಬುದ್ದಿವಂತಿಕೆ, ಜ್ಞಾನ, ಉತ್ತಮ ಆರೋಗ್ಯ, ಶಕ್ತಿ ಮತ್ತು ಮನಸ್ಸಿನ ಶಾಂತಿ ಯೊಂದಿಗೆ ಈ ಜಗತ್ತಿನಲ್ಲಿ ಸರಿಯಾದ ದಿಕ್ಕಿನಲ್ಲಿ ನಡೆಯುವುಂತೆ ಮಾಡಲು ಒಳ್ಳೆಯ ದೇವರು ನಿಮಗೆ ಬುದ್ದಿವಂತಿಕೆಯನ್ನು ನೀಡುವುದನ್ನು ಮುಂದುವರಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಸತ್ಯವೇದವು ಈ ರೀತಿಯಾಗಿ ಹೇಳುತ್ತದೆ, ಯಾಜಕರನ್ನು ಮೃಷ್ಟಭೋಜನದಿಂದ ತಂಪು ಗೊಳಿಸುವೆನು; **ನಾನು ಅನುಗ್ರಹಿಸಿದ ಮೇಲುಗಳನ್ನು ನನ್ನ ಜನರು ಸಮೃದ್ಧಿಯಾಗಿ ಅನುಭವಿಸುವರು.ಇದು ಯೆಹೋವನ ನುಡಿ.** ಯೆರಮೀಯ 31:14.

ಎಂತಹ ಸುಂದರವಾದ ವಾಗ್ದನವು ವರ್ಷದ ಪ್ರಾರಂಭದಲ್ಲಿ ಹಿಡಿದುಕೊಳ್ಳುವುದು! ನನ್ನನ್ನು ಜನರು ತೃಪ್ತರಾಗುವರು ನನ್ನ ಒಳ್ಳೆಯತನದಿಂದ. ಇದರ ಅರ್ಥ ನಾನು ಅತೃಪ್ತನಾಗುವುದಿಲ್ಲ, ಕೊರತೆ ಅಥವಾ ಕೊರೆತೆಯಿಲ್ಲ. ಈ ವರ್ಷದಲ್ಲಿ ನನ್ನ ದೇವರು ನನ್ನ ಎಲ್ಲಾ ಅಗತ್ಯತೆಗಳನ್ನು ಪೂರೈಸುವನು. ದೇವರ ಒಳ್ಳೆಯತನವನ್ನು ಅನುಭವಿಸುವ ವರ್ಷವು ಈ ವರ್ಷವಾಗಿರಲಿ ಮತ್ತು ಆತನ ಒದಗಿಸುವಿಕೆ ಯಿಂದ ತೃಪ್ತರಾಗುವುದು. ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ದಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ,ಕಿವಿ ಕೇಳಲಿಲ್ಲ, 1 ಕೊರಿಂಥ 2:9. ಈ ರೀತಿಯಾಗಿ ದೇವರು ಈ ವರ್ಷವು ನಮ್ಮನ್ನು ನಡೆಸುವನು. ನೀವು ಉತ್ಸಾಕ ರಾಗಿದ್ದೀರಾ? ನಾನು ಬಹಳ ಉತ್ಸುಕನಾಗಿದ್ದೇನೆ ಯಾಕೆಂದರೆ ಅತನು ತನ್ನ ವಾಗ್ದಾನಗಳಲ್ಲಿ ನಂಬಿಗಸ್ತನಾಗಿದ್ದಾನೆ.

## ದೇವರ ಒಳ್ಳೆಯತನ!

ದೇವರು, ನಮ್ಮ ಪರಲೋಕದ ತಂದೆ. ಈಗಾಗಲೇ ಅನೇಕ ಒಳ್ಳೆಯತನಗಳಿಂದ ನಮ್ಮನ್ನು ಅಶೀರ್ವದಿಸಿದ್ದಾನೆ. ಏನೇ ಹಾಗಲಿ, ಸೈತಾನನು ನಮ್ಮ ಮನಸ್ಸುಗಳನ್ನು ಯುಕ್ತಿಯಿಂದ ಬಳಸುವದಕ್ಕೆ ಪ್ರಯತ್ನಿಸುತ್ತಾನೆ ಮತ್ತು ನಮ್ಮ ದೃಷ್ಟಿಕೋನವನ್ನು ಗಲಿಬಲಿಗೊಳಿಸುತ್ತಾನೆ. ನಮ್ಮನ್ನು ಸುತ್ತು ವರೆದಿರುವ ಆಶೀರ್ವಾದಗಳನ್ನು ಕಡೆಗಣಿಸುವಂತೆ ಮಾಡುತ್ತದೆ.

ಈಗ ನಾವು ಏದೆನ್ ತೋಟದ ಉದಾರಣೆ ಯನ್ನು ಪರಿಕ್ಷೆ ಮಾಡೋಣ. ಆದಿಕಾಂಡ 1:26-28,31ರಲ್ಲಿ ದೇವರು ಅದಾಮ ಹವ್ವಳನ್ನು ಆಶೀರ್ವದಿಸಿದನು ಎಂದು ಹೇಳುತ್ತದೆ.

**ಆ ಮೇಲೆ ದೇವರು-ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ; ಅವರು ಸಮುದ್ರ ದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು. ಹೀಗೆ ದೇವರು ಮನುಷ್ಯರನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು. ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು. ದೇವರು ತಾನು ಉಂಟು ಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು, ಸಾಯಂಕಾಲವೂ ಪ್ರಾತಃ ಕಾಲವೂ ಆಗಿ ಆರನೆಯ ದಿನವಾಯಿತು.**

ಇದರ ಜೊತೆಗೆ ದೇವರು ಆಜ್ಞಾಪಿಸಿದನು, ಆದಿಕಾಂಡ 2:17 **ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನ ಬಾರದು; ತಿಂದ ದಿನ ಸತ್ತೇಹೋಗುವಿ ಎಂದು ವಿಧಿಸಿದನು.**

ನಾವು ಎಲ್ಲಾದರ ಮೇಲೆ ಅಳ್ವಿಕೆಯನ್ನು ಮಾಡಬೇಕೆಂದು ದೇವರು ಘೋಷಿಸಿದ್ದಾನೆ. ಆದರೆ ಈ ಹೊತ್ತಿನ ಲೋಕದಲ್ಲಿ ನಮ್ಮ ಸುತ್ತಮುತ್ತ ಇರುವ ಸಂಗತಿಗಳು ನಮ್ಮನ್ನು ಅಳ್ವಿಕೆ ಮಾಡುತ್ತಾ ಇವೆ ಎಂದು ಅನಿಸಿಕೆಯಾಗುತ್ತದೆ. ನಮ್ಮ ಫೋನ್‌ಗಳು ಮತ್ತು ತಂತ್ರಜ್ಞಾನವು ಕೂಡ.

ದೇವರ ವಾಕ್ಯವನ್ನು ಸೈತಾನನು ತಿರುಚಿದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಆಗ ಸರ್ಪವು ಸ್ತ್ರೀಗೆ ನೀವು ಹೇಗೂ ಸಾಯುವುದಿಲ್ಲ; **ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದರ ಭೇದವನ್ನು ಅರಿತವರಾಗುವಿರಿ; ಇದು ದೇವರಿಗೆ ಚೆನ್ನಾಗಿ ಗೊತ್ತುಂಟು ಅಂದಿತು.**

ಆದಿಕಾಂಡ 3:4,5 ಇಲ್ಲಿ, ನಾವು ಸೈತಾನನ ಮಾತುಗಳ ಕುಶಲತೆಯನ್ನು ನೋಡುತ್ತೇವೆ. ಆದಾಮ ಮತ್ತು ಹವ್ವಳರು ಸಾಯುವುದಿಲ್ಲ ಎಂದು ಕಲ್ಪನೆಯೊಂದಿಗೆ ಅವರನ್ನು ಆಕರ್ಷಿಸುತ್ತಾನೆ, ಬದಲಿಗೆ ದೇವರಂತೆ ಆಗುತ್ತೀರಿ. ಸೈತಾನನು ತನ್ನ ಕೊಡುಗೆಗಳನ್ನು ದೇವರು ಒದಗಿಸುವದಕ್ಕಿಂತ ಹೆಚ್ಚು ಮತ್ತು ಹೆಚ್ಚು ಶಕ್ತಿಯುತವಾಗಿ ಪ್ರಸ್ತುತ ಪಡಿಸುತ್ತಾನೆ. ಯಾಕೆ ಈ ಒಂದು ಕುಶಲತೆ ಪ್ರಸಿದ್ಧವಾಗಿ ಕಾಣುತ್ತದೆ? ಈ ಹೊತ್ತು ಕೂಡ, ಸೈತಾನನು ಜನರನ್ನು ದೇವರ ಮಾರ್ಗದಿಂದ ದೂರ ಮಾಡುವದಕ್ಕೆ ಈ ಸೂತ್ರವನ್ನು ಉಪ ಯೋಗಿಸುತ್ತಾನೆ. ಅವನು ಪ್ರಾಂಪಚಿಕ ಸಂಗತಿಗಳು ಉನ್ನತವೆಂದು ಪ್ರಸ್ತುತಪಡಿಸುತ್ತಾನೆ. ನಮ್ಮ ಪ್ರೀತಿಯ ಯೇಸು ನೀಡುವದಕ್ಕಿಂತ ಹೆಚ್ಚಿನದು ಮತ್ತು ಹೆಚ್ಚು ಶಕ್ತಿಶಾಲಿ.

ಅಂತಿಮವಾಗಿ, ಆದಾಮ ಮತ್ತು ಹವ್ವಳರು ಸೈತಾನನ ಸ್ವರವನ್ನು ಕೇಳಿದಾಗ, ಅವರು ತಮ್ಮ ಜೀವಿತದಲ್ಲಿ ಬಹಳ ಪ್ರಾಮುಖ್ಯವಾದ ವಿಷಯವನ್ನು ಕಳೆದುಕೊಂಡರು.

**ಅವರ ಕಣ್ಣುಗಳು ತೆರೆಯಲ್ಪಟ್ಟವು-ಅದರೆ ಅವರು ತಮ್ಮ ಸಂತೋಷ, ಶಾಂತಿಯನ್ನು ಕಳೆದು ಕೊಂಡು ತಮ್ಮನ್ನು ಬಚ್ಚಿಟ್ಟುಕೊಂಡರು.** ಆದಿಕಾಂಡ 3:7-10

**ಇದರಿಂದ ಕೈಚಾಚಿ ಜೀವವೃಕ್ಷದ ಫಲವನ್ನು ಸಹ ತೆಗೆದು ತಿಂದು ಶಾಶ್ವತವಾಗಿ ಬದುಕುವವನಾಗ ಬಾರದು ಅಂದುಕೊಂಡು ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವದಕ್ಕಾಗಿ ಅವನನ್ನು ಏದೆನ್ ತೋಟದಿಂದ ಹೊರಡಿಸಿ ಬಿಟ್ಟನು.** ಆದಿಕಾಂಡ 3:23.

ಪುರಷನಿಗೆ ತಿನ್ನಬಾರದೆಂದು ನಾನು ನಿಮಗೆ ಆಜ್ಞಾಪಿಸಿದ ಮರದ ಫಲವನ್ನು ನೀನು ಹೆಂಡತಿಯ ಮಾತು ಕೇಳಿ ತಿಂದ ಕಾರಣ ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು. ನಿನ್ನ ಜೀವಮಾನವೆಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು. ಆ ಭೂಮಿಯಲ್ಲಿ ಮುಳ್ಳುಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು. ಹೊಲದ ಬೆಳೆಯನ್ನು ಅನುಭವಿಸುವಿ. ನೀನು ತಿರುಗಿ ಮಣ್ಣಿಗೆ ಸೇರುವತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸ ಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟನಲ್ಲವೋ; ನೀನು ಮಣ್ಣೇ; ಪುನ: ಮಣ್ಣಿಗೆ ಸೇರತಕ್ಕವನಾಗಿದ್ದೀ ಎಂದು ಹೇಳಿದನು. (ಆದಿಕಾಂಡ 3:17-19).

ಅವರು ಒಳೆಯತನವನ್ನು ಕಳೆದು ಕೊಂಡರು!!! ದೇವರೊಂದಿಗೆ ಇರುವ ಸಂಗತಿಯ ಸಂತೋಷವನ್ನು.

ಸಂತೋಷವು ದೇವರ ಒಳ್ಳೆಯತನದ ಸಾಕ್ಷಿಯಾಗಿದೆ (ಅ, ಕೃ 14:17). ಆಕಾಶದಿಂದ ಮಳೆಯನ್ನು ಮತ್ತು ತಕ್ಕ ಕಾಲದಲ್ಲಿ ಬೆಳೆಯನ್ನು ಕೊಡುವುದರ ಮೂಲಕ ಆತನು ದಯೆಯನ್ನು ತೋರಿಸಿದನು. ಆತನು ಸಮೃದ್ಧಿಯಾಗಿ ನಿಮಗೆ ಅಹಾರವನ್ನು ಒದಗಿಸುವನು ಮತ್ತು ಸಂತೋಷದಿಂದ ನಿಮ್ಮ ಹೃದಯವನ್ನು ತುಂಬಿಸುತ್ತಾನೆ.

ನಮ್ಮಲ್ಲಿ ಅನೇಕ ಜನರು ಸಂತೋಷ ಮತ್ತು ಆನಂದದ ಬಗ್ಗೆ ಗೊಂದಲದಲ್ಲಿ ಇದ್ದೇವೆ. ಅದ್ದರಿಂದ ನಾನು ಸಂಶೋಧನೆ ಮಾಡಿ ವ್ಯತ್ಯಾಸವನ್ನು ಕಂಡುಹಿಡಿದಿದ್ದೇನೆ.

- ಸಂತೋಷವು ಸಣ್ಣ ವಾಕ್ಯ. ಆನಂದವು ದೊಡ್ಡ ವಾಕ್ಯ.
- ಸಂತೋಷವು ಹೃದಯದಲ್ಲಿ. ಆನಂದವು ಮುಖದಲ್ಲಿ.
- ಸಂತೋಷವು ಆತ್ಮವಾಗಿದೆ. ಆನಂದವು ಸದ್ಯಕ್ಕೆ.
- ಸಂತೋಷವು ಮೀರುತ್ತದೆ. ಆನಂದವು ಪ್ರತಿಕ್ರಿಯಿಸುತ್ತದೆ.
- ಸಂತೋಷವು ಶಾಂತಿ ಮತ್ತು ಸಂತೃಪ್ತಿಯನ್ನು ಅಪ್ಪಿಕೊಳ್ಳುತ್ತದೆ. ಪತ್ತೆಹಚ್ಚಲು ಕಾಯುತ್ತದೆ.
- ಸಂತೋಷವು ಆಳವಾಗಿ ಓಡುತ್ತದೆ ಮತ್ತು ಉಕ್ಕಿ ಹರಿಯುತ್ತದೆ ಆದರೆ ಆನಂದವು ಹಲೋ ಎಂದು ಅಪ್ಪಿಕೊಳ್ಳುತ್ತದೆ.
- ಸಂತೋಷವು ಅಭ್ಯಾಸ ಮತ್ತು ನಡವಳಿಕೆ,ಇದು ಉದ್ದೇಶಪೂರ್ವಕ ಮತ್ತು ಉದ್ದೇಶ ಪೂರ್ವಕವಾಗಿದೆ.ಅನಂದವು ಅದು ದಾರಿಯುದ್ದಕ್ಕೂ ಬಿರುಸಾಗಿ ಬಂದು ಹೋಗುತ್ತದೆ.
- ಸಂತೋಷವು ಆಗಾಧವಾದ ಮತ್ತು ವಾಕ್ಯವಾಗಿದೆ. ಚಿಂತೆ ಮಾಡಬೇಡರಿ ಸಂತೋಷಿಸಿರಿ. ಆನಂದವು ಮುಲಾಮು ಆಗಿದೆ. ಚಿಂತೆ ಮಾಡಬೇಡಿರಿ ಆನಂದ ವಾಗಿರಿ.
- ಸಂತೋಷವು ಅಂತರಿಕ ಅನುಭವ. ಆನಂದವು ಹೊರಗಿನ ವ್ಯಕ್ತಪಡಿಸುವಿಕೆ.
- ಸಂತೋಷವು ಸಂಕಷ್ಟಗಳನ್ನು ಸಹಿಸಿ ಕೊಳ್ಳುತ್ತದೆ ಮತ್ತು ಸಮಸ್ಯೆಗಳು ಮತ್ತು ಅದರ ಉದ್ದೇಶದ ಅರ್ಥಕ್ಕೆ ಜೋಡಣೆ ಯಾಗುತ್ತದೆ.

ಒಬ್ಬ ವ್ಯಕ್ತಿಯು ಆನಂದವನ್ನು ಹಿಂಬಾಲಿಸುತ್ತಾನೆ ಆದರೆ ಸಂತೋಷವನ್ನು ಆರಿಸಿಕೊಳ್ಳುತ್ತಾನೆ.

ಅನೇಕ ಸಾರಿ ಸಂತೋಷ ಮತ್ತು ಆನಂದವು ಜೊತೆಜೊತೆಯಾಗಿ ಹೋಗುತ್ತದೆ. ಎಲ್ಲಿ ಶಾಂತಿ ಇರುತ್ತದೆ ಅಲ್ಲಿ ಸಂತೋಷವಿರುತ್ತದೆ ಮತ್ತು ಎಲ್ಲಿ ಸಂತೋಷವಿರುತ್ತದೆ ಅಲ್ಲಿ ಶಾಂತಿ ಇರುತ್ತದೆ. ಅವರು ಅವಳಿಸಹೋದರಿಯರು.ಸಂತೋಷವು ದೇವರ ಒಳ್ಳೆಯತನದಲ್ಲಿ ಒಂದು ಅಗಿದೆ.ಆತನು ನಮಗೆ ನಮ್ಮ ಹೃದಯವನ್ನು ಸಂತೋಷದಿಂದ ತುಂಬಿಸುತ್ತಾನೆಂದು ವಾಗ್ದಾನವನ್ನು ಮಾಡಿದ್ದಾನೆ.

ನೆಹಮೀಯ 8:10 ರಲ್ಲಿ ಈ ರೀತಿಯಾಗಿ ಹೇಳುತ್ತದೆ, **ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ.**

ಅದಾಗ್ಯೂ, ಸೈತಾನನು ಹವ್ವಳೊಂದಿಗೆ ಮಾಡಿದಂತೆಯೇ ದೇವರ ಒಳ್ಳೆಯತನದ ಬಗ್ಗೆ ನಮ್ಮ ಗ್ರಹಿಕೆಯನ್ನು ವಿರೂಪಗೊಳಿಸಲು ಪ್ರಯತ್ನಿಸುತ್ತಾನೆ. ದೇವರು ನಮಗೆ ನೀಡಿದ್ದಕ್ಕಿಂತ ಹೆಚ್ಚಿನದನ್ನು ಹಂಬಲಿಸಲು ಸೈತಾನನು ನಮ್ಮನ್ನು ಪ್ರಚೋದಿಸುತ್ತಾನೆ.

## 1. ಅತೃಪ್ತಿ!

ದೇವರು ವಾಗ್ದಾನ ಮಾಡಿದ್ದನ್ನು ಹವ್ವಳು ಅದರಲ್ಲಿ ಸಂತೃಪ್ತಿಯಾಗಲಿಲ್ಲ. ಅತೃಪ್ತಿಯು ದೇವರ ಒಳ್ಳೆಯತನಕ್ಕೆ ಮೊದಲ ವೈರಿಯಾಗಿದೆ. ನಾನು

*(6ನೇ ಪುಟಕ್ಕೆ)*

RESIDENTIAL BIBLE COURSE
NEHEMIAH BIBLE COLLEGE, Chennai.
Medium : Hindi
Registered Candidate for Membership
Asia Theological Association (ATA)
Recognised by International Christian Leaders & Senior Pastors for the past 54 years
Certificate in Ministry
Diploma in Theology
Qualification : 10th Standard & above
Rush for Admission!
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
✶ ONLINE CLASSES ARE AVAILABLE ✶

GREAT COMMISSION PARTNERS
ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13 )
ತ್ವರಿತಗೊಳಿಸುವುದು ( II ತಿಮೊಥಿ. 1:6 )

**19 ಜನವರಿ 2024 ರಿಂದ 18 ಫೆಬ್ರುವರಿ 2024 ರ ವರೆಗೆ**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

## ಸ್ತೋತ್ರಕ್ಕಾಗಿ ಅಂಶಗಳು

| | | |
|---|---|---|
| ಜನವರಿ 19 | : | ಮುಖ್ಯ ಸಭೆ ಮತ್ತು ಶಾಖಾ ಸಭೆಗಳಲ್ಲಿ ಅರ್ಥಗರ್ಭಿತ ಮತ್ತು ಪರಿಣಾಮಕಾರಿಯಾಗಿ ಕ್ರಿಸ್ತಜಯಂತಿ ಮತ್ತು ಹೊಸವರ್ಷದ ಆಚರಣೆಗಳನ್ನು ಆಚರಿಸುವಂತೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ಆತನಿಗೆ ಸ್ತೋತ್ರವಾಗಲಿ. |
| ಜನವರಿ 20 | : | ನಮ್ಮ ಪ್ರಾರ್ಥನಾ ಪಾಲುಗಾರರು, ಚಂದಪಾಲುಗಾರರು, ನಂಬಿಕೆಯ ಪಾಲುಗಾರರು, ಜೀವನ ಪಾಲುಗಾರರು ಮತ್ತು ದೊಡ್ಡ ಆಜ್ಞೆಯ ಪಾಲುಗಾರರು ಅವರ ಕುಟುಂಬಗಳ ಮೇಲ ಆತನ ದಯೆಗಾಗಿ. |
| ಜನವರಿ 21 | : | ನಮ್ಮ ಸಭಾ ಪಾಲಕರುಗಳು ಮತ್ತು ಮುಖ್ಯ ಸಭೆಯ ನಾಯಕರುಗಳು ಮತ್ತು ಶಾಖ ಸಭೆಗಳ ಮೇಲೆ ಆತನ ಆಶೀರ್ವಾದಕ್ಕಾಗಿ. |
| ಜನವರಿ 22 | : | **ಗ್ಲೋಬಲ್ ವಿಷನ್ ಫಾರ್ ಯುತ್ ಮತ್ತು ಕಿಡ್ಸ್ ಕೇರ್ ಸೇವೆ**ಯ ಮೇಲೆ ಆತನ ಆಶೀರ್ವಾದಕ್ಕಾಗಿ. |
| ಜನವರಿ 23 | : | ತಲುಪದೇ ಇರುವ ಜನಗಳಿಗೆ ತಲುಪುವಂತೆ ನಮ್ಮ 5 ನಿಮಿಷ ಯೂಟುಬ್ ಸೇವೆಯ ಮೇಲೆ ಆತನ ಆಶೀರ್ವಾದಕ್ಕಾಗಿ. |
| ಜನವರಿ 24 | : | **ಸಂತ ಪೌಲ ಮೆಟ್ರಿಕೇಲ್ಯುಷನ್ ಶಾಲೆ, ನೆಹಮೀಯ ಸತ್ಯವೇದ ಕಾಲೇಜ್** ಮತ್ತು **ದೈವಶಾಸ್ತ್ರದ ದೂರ ಶಿಕ್ಷಣ ಕೋರ್ಸ್**ಗಳ ಎಲ್ಲಾ ಚಟುವಟಿಕೆಗಳಿಗಾಗಿ. |
| ಜನವರಿ 25 | : | ನಮ್ಮ 16 ಭಾಷೆಗಳ ಮಾಸ ಪತ್ರಿಕೆಯ ಆತನ ಆಶೀರ್ವಾದ, ನಮ್ಮ ಮುದ್ರಣಾಲಯದಲ್ಲಿ ಮುದ್ರಿಸಿ, ಸೇವಾಕ್ಷೇತ್ರಗಳಿಗೆ ಕಳುಹಿಸುವುದು. |
| ಜನವರಿ 26 | : | ಕಳೆದ ತಿಂಗಳಲ್ಲಿ ನಮ್ಮ ಅಗತ್ಯತೆಗಳನ್ನು ಮತ್ತು ಆತ್ಮೀಕ ಅಗತ್ಯತೆಗಳನ್ನು ಪೂರೈಸಿದಕ್ಕಾಗಿ. |
| ಜನವರಿ 27 | : | ನಮ್ಮ ಸೇವಾ ಕ್ಷೇತ್ರಗಳಲ್ಲಿರುವ ಮಿಶನರಿಗಳು ಮತ್ತು ಅವರ ಕುಟುಂಬಗಳ ಮೇಲೆ ಆತನ ಆಶೀರ್ವಾದಕ್ಕಾಗಿ. |
| ಜನವರಿ 28 | : | ನಮ್ಮ ಹಿರಿಯ ಸಭಾಪಾಲಕರು, ಅನೇಕ ವಿಧಗಳಲ್ಲಿ ಸುವಾರ್ತೆಯನ್ನು ಸಾರುವ ಅವರ ಸಮರ್ಪಣೆಗಾಗಿ ದೇವರಿಗೆ ಸ್ತೋತ್ರವಾಗಲಿ. |
| ಜನವರಿ 29 | : | ನಮ್ಮ ಆತನ **ಕರೆಯ ಪ್ರತಿಧ್ವನಿ**ಯ ಸೇವೆಯ ಎಲ್ಲಾ ಸಿಬ್ಬಂದಿವರ್ಗದವರು ಮತ್ತು ಅವರ ಕುಟುಂಬಗಳ ಆರೋಗ್ಯಕ್ಕಾಗಿ ಹಾಗು ದೈವತ್ವದ ಸಂರಕ್ಷಣೆಗಾಗಿ. |
| ಜನವರಿ 30 | : | 2024 ರ ತಿಂಗಳ ಕ್ಯಾಲೆಂಡರ್‌ನ್ನು ಮುದ್ರಿಸಿ ಮತ್ತು ಕಳುಹಿಸುವಂತೆ ಆತನ ಕೃಪೆಗಾಗಿ ಸ್ತೋತ್ರ. |
| ಜನವರಿ 31 | : | ಎಲ್ಲಾ ದುಷ್ಟಶಕ್ತಿಗಳಿಂದ ನಮ್ಮ ಹಿರಿಯ ಸಭಾಪಾಲಕರನ್ನು ಮತ್ತು ಅವರ ಕುಟುಂಬವನ್ನು ಸಂರಕ್ಷಣೆಮಾಡಿದಕ್ಕಾಗಿ ಸ್ತೋತ್ರವಾಗಲಿ. |
| ಫೆಬ್ರುವರಿ 01 | : | ನಮ್ಮ ಎಲ್ಲಾ ಪ್ರಾರ್ಥನೆ ಪಾಲುಗಾರರು ಮತ್ತು ಹಣಕಾಸಿನ ಪಾಲುಗಾರರ ಮೇಲೆ ದೇವರ ಆಶೀರ್ವಾದಕ್ಕಾಗಿ. |
| ಫೆಬ್ರುವರಿ 02 | : | ನಮ್ಮ ಎಲ್ಲಾ ಸಹ ಸಂಪಾದಕರು ಮತ್ತು ಅವರ ಕುಟುಂಬಗಳ ಮೇಲೆ ದೇವರ ಆಶೀರ್ವಾದಕ್ಕಾಗಿ. |
| ಫೆಬ್ರುವರಿ 03 | : | ನಮ್ಮ ಮುಖ್ಯ ಸಭೆ ಮತ್ತು ಶಾಖಾ ಸಭೆಗಳಲ್ಲಿ ದೇವರ ವಾಕ್ಯದ ಶಕ್ತಿಗಾಗಿ ಆತನಿಗೆ ಸ್ತೋತ್ರವಾಗಲಿ. |

## ಪ್ರಾರ್ಥನೆಗಾಗಿ ಅಂಶಗಳು

| | | |
|---|---|---|
| ಫೆಬ್ರುವರಿ 04 | : | ಎಲ್ಲಾ ಕ್ರೈಸ್ತ ಸಂಘ ಸಂಸ್ಥೆಗಳು ಮತ್ತು ಸಭೆಗಳ ಸಂರಕ್ಷಣೆಗಾಗಿ ಪ್ರಾರ್ಥಿಸಿರಿ. |
| ಫೆಬ್ರುವರಿ 05 | : | ನಮ್ಮ ಎಲ್ಲಾ ಸಿಬ್ಬಂದಿ ವರ್ಗದವರು ಮತ್ತು ಮುದ್ರಣ ಸಿಬ್ಬಂದಿಯವರ ಆರೋಗ್ಯಕ್ಕಾಗಿ ಪ್ರಾರ್ಥನೆಮಾಡಿರಿ. |
| ಫೆಬ್ರುವರಿ 06 | : | ನಮ್ಮ ಸಾಯಂಕಾಲದ **ನೆಹಮಿಯ ಸತ್ಯವೇದ ಕಾಲೇಜು** ಮತ್ತು ಅದರ ವಿದ್ಯಾರ್ಥಿಗಳ ಸಂರಕ್ಷಣೆಗಾಗಿ ಪ್ರಾರ್ಥನೆ ಮಾಡಿರಿ. |
| ಫೆಬ್ರುವರಿ 07 | : | ಪಾ. ಸ್ಯಾಮ್ ಸೆಲ್ವರಾಜ ಅವರ ಸಂದೇಶಗಳನ್ನು ಹೆಚ್ಚುವರಿ ಭಾಷೆಗಳಲ್ಲಿ ಆತನ **ಕರೆಯ ಪ್ರತಿಧ್ವನಿಯ ಯು ಟ್ಯೂಬ್ ಚಾನೆಲ್**‌ನಲ್ಲಿ ಪ್ರಸಾರಮಾಡಲಾಗುತ್ತದೆ. |
| ಫೆಬ್ರುವರಿ 08 | : | ನಮ್ಮ ಜೊತೆ ಕೆಲಸದವರು ನಮ್ಮ **ನೆಹಮೀಯ ಸತ್ಯವೇದ ಕಾಲೇಜಿ**ಗಾಗಿ ಭೋದನೆಯಲ್ಲಿ ಮತ್ತು ಭಾಷಾಂತರದಲ್ಲಿ ತೊಡಗಿದ್ದಾರೆ. |
| ಫೆಬ್ರುವರಿ 09 | : | ಇಸ್ರಾಯೇಲ್ಯನಲ್ಲಿ, ರಷ್ಯಾ, ಯುಕ್ರೇನ್, ಪ್ಯಾಲೆಸ್ತೇನ್‌ನಲ್ಲಿ ಶಾಂತಿಗಾಗಿ. |
| ಫೆಬ್ರುವರಿ 10 | : | ಕೋಹ ಸಾಫ್ಟ್‌ವೇರ್‌ನಲ್ಲಿ ನಮ್ಮ ನೆಹಮೀಯ ಸತ್ಯವೇದ ಕಾಲೇಜಿನಲ್ಲಿ ಗ್ರಂಥಾಲಯವನ್ನು ಅಪ್‌ಡೇಟ್ ಮಾಡುವುದು. |
| ಫೆಬ್ರುವರಿ 11 | : | ನಮ್ಮ ಹಿರಿಯ ಸಭಾಪಾಲಕ ರಾದ ಪಾ, ಸ್ಯಾಮ್ ಸೆಲ್ವರಾಜ ಮತ್ತು ಅವರ ಕುಟುಂಬದವರನ್ನು ಎಲ್ಲಾ ದುಷ್ಟಶಕ್ತಯಿಂದ ಸಂರಕ್ಷಿಸುವಂತೆ. |
| ಫೆಬ್ರುವರಿ 12 | : | ಪ್ರಪಂಚದಲ್ಲಿ ಚಾಲ್ತಿಯಲ್ಲಿರುವ ಆರ್ಥಿಕ ಹಿಂಜರಿತವು ಅಂತ್ಯಗೊಳ್ಳುವಂತೆ. |
| ಫೆಬ್ರುವರಿ 13 | : | ಮಿಶನರಿಗಳ ವಿರೋಧವಾಗಿ ನಡೆಯುತ್ತಿರುವ ಹಿಂಸೆ, ಸಂಕಷ್ಟಗಳು ಮತ್ತು ದೇವರ ಸೇವಕರುಗಳಿಗಾಗಿ. |
| ಫೆಬ್ರುವರಿ 14 | : | ಜಗತ್ತಿನಲ್ಲಿರುವ ಎಲ್ಲಾ ಮಹಿಳೆಯರ ಮತ್ತು ಮಕ್ಕಳ ಸಂರಕ್ಷಣೆಗಾಗಿ. |
| ಫೆಬ್ರುವರಿ 15 | : | ನಮ್ಮ ಹಿರಿಯ ಸಭಾಪಾಲಕರ ಆತ್ಮಚರಿತ್ರೆಯು ಸಫಲವಾಗಿ ಸಂಪೂರ್ಣ ವಾಗುವಂತೆ. |
| ಫೆಬ್ರುವರಿ 16 | : | ಆತನ **ಕರೆಯ ಪ್ರತಿಧ್ವನಿ**ಯ ಸೇವೆಯ ಯೌವ್ವಸ್ಥರ ಮತ್ತು ಹೊರಗಿನ ಸೇವೆಗಳಿಗಾಗಿ. |
| ಫೆಬ್ರುವರಿ 17 | : | ಆತನ **ಕರೆಯ ಪ್ರತಿಧ್ವನಿ**ಯ ಈ ವರ್ಷದ ಅಗತ್ಯವಾದ ಹಣಕಾಸಿನ ಸಹಾಯಕ್ಕಾಗಿ. |
| ಫೆಬ್ರುವರಿ 18 | : | ಪ್ರಪಂಚದ ಎಲ್ಲಾ ಕಡೆಯಲ್ಲಿ ಕರೋನ ವೈರಸ್ ಮತ್ತು ಹೊಸ ವೈರಸ್ ಸಂಪೂರ್ಣವಾಗಿ ನಿರ್ಮೂಲವಾಗುವಂತೆ. |

(4ನೇ ಪುಟದಿಂದ)

ಅದನ್ನು ಹೊಂದಿದ್ದೇನೆ ಅಥವಾ ನನಗೆ ಹೆಚ್ಚು ಬೇಕು ಎಂದು ನಾವು ಹೇಳುವುದನ್ನು ಕಂಡುಕೊಂಡಾಗ, ದೇವರು ನಮಗೆ ಕೊಟ್ಟದ್ದನ್ನು ನಾವು ಮೆಚ್ಚುವುದಿಲ್ಲ ಮತ್ತು ತೃಪ್ತರಾಗಿರುವುದಿಲ್ಲ,ಆದರೆ ನಾವು ಹಾಗೆ ಮಾಡಿದರೆ ನಾವು ಸಂತೋಷವನ್ನು ಅನುಭವಿಸುತ್ತೇವೆ.

ರೋಮ 15:13 ನಮಗೆ ಜ್ಞಾಪಕಪಡಿಸುತ್ತದೆ ನಿರೀಕ್ಷೆಯ ಮೂಲನಾದ **ದೇವರು ನಂಬಿಕೆಯಿಂದುಂಟಾಗುವ ಸಂತೋಷವನ್ನೂ ಮನಶ್ಶಾಂತಿಯನ್ನೂ ನಿಮಗೆ ಪರಿಪೂರ್ಣವಾಗಿ ದಯಪಾಲಿಸಿ ನೀವು ಪವಿತ್ರಾತ್ಮನ ಬಲಗೂಡಿದವರಾಗಿ ನಿರೀಕ್ಷೆಯಲ್ಲಿ ಅಭಿವೃದ್ಧಿಯನ್ನು ಹೊಂದುವಂತೆ ಅನುಗ್ರಹಿಸಲಿ.** ಅತೃಪ್ತಿಯು ನಮ್ಮ ಸಂತೋಷವನ್ನು ಕದ್ದುಕೊಳ್ಳುತ್ತದೆ. ಇದು ದೇವರ ವಾಗ್ದಾನಕ್ಕೆ ವಿರೋಧವಾಗಿದೆ. ಇದರ ಬದಲಾಗಿ ದೇವರ ಒಳ್ಳೆಯತನವನ್ನು ತುಂಬಿದವರಾಗಿ ಸಂತೃಪ್ತಿಯನ್ನು ಕಲಿತುಕೊಳ್ಳ ಬೇಕಾಗಿದೆ. ದೇವರು ಕೊಟ್ಟಿದ್ದರಲ್ಲಿ ಸಂತೋಷ ವಿರುವದಕ್ಕೆ ನಾವು ಕಲಿತುಕೊಳ್ಳೋಣ. ಸಂತೃಪ್ತಿಯ ಆತ್ಮವನ್ನು ನಾವು ಬೆಳೆಸಿಕೊಳ್ಳ ಬೇಕಾಗಿದೆ. ಈ ವರ್ಷದ ಪ್ರಾರಂಭದಲ್ಲಿ ಧನ್ಯವಾದದ ಆತ್ಮವನ್ನು ಕಲಿತುಕೊಳ್ಳೋಣ.

## 2. ನಿರಾಶೆ !

ನಮ್ಮ ಸಂತೋಷವನ್ನು ಕಸಿದುಕೊಳ್ಳಲು ಸೈತಾನನು ಸೃಷ್ಟಿಸಿದ ಮತ್ತೊಂದು ಭ್ರಮೆ ನಿರಾಶೆ. ಎಲ್ಲಿ ಎದುರುನೋಡುವಿಕೆ ಇದೆಯೋ, ಅಲ್ಲಿ ನಿರಾಶೆಯು ಖಂಡಿತವಾಗಿ ಇರುತ್ತದೆ.

ಅನೇಕ ಸಾರಿ ಪ್ರಾರ್ಥನೆಮಾಡಿದ ಹಾಗೆ ದೇವರು ನಮಗೆ ಉತ್ತರಿಸಬೇಕೆಂದು ನಾವು ಅಪೇಕ್ಷೆಪಡುತ್ತೇವೆ. ನಮ್ಮ ಆಸೆಗಳು ನೇರವೇರದೆ ಇದ್ದಾಗ ನಾವು ನಿರಾಶೆಗೆ ಒಳಗಾಗುತ್ತೇವೆ. ನಾವು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು ನಮ್ಮನ್ನು ಇನ್ನಷ್ಟು ಕೆಳಕ್ಕೆ ಎಳೆಯುವಂತೆ ತೋರುತ್ತದೆ ಮತ್ತು ಅದ್ದರಿಂದ ನಿರಾಶೆಯನ್ನು ಅನುಭವಿಸುತ್ತೇವೆ. ಉದಾರಹಣೆಗೆ, ನಾವು ಒಂದು ಪ್ರತ್ಯೇಕವಾದ ಕೆಲಸ ಅಥವಾ ಪದನ್ನೋತಿಗಾಗಿ ಆಸೆಪಡುತ್ತೇವೆ, ಆದರೆ ನಾವು ಅದನ್ನು ಸಾಧಿಸಿದಾಗ, ಇದು ತನ್ನದೇ ಆದ ಸವಾಲುಗಳು ಮತ್ತು ಒತ್ತಡದೊಂದಿಗೆ ಬರುತ್ತದೆ **ಎಂದು ನಾವು ಅರಿತುಕೊಳ್ಳುತ್ತೇವೆ. ಕೆಲಸದ ಹೊರೆಯು ಅಗಾಧವಾಗಬಹುದು, ಮತ್ತು ಇದು ಇನ್ನು ಮುಂದೆ ನಮ್ಮ ಆರಂಭಿಕ ನಿರೀಕ್ಷೆಗಳನ್ನು ಪೂರೈಸುವುದಿಲ್ಲ ಇದು ಹೀಗಿರುತ್ತದೆ ಎಂದು ನಾನು ಭಾವಿಸಿದೆ. ಅಥವಾ ಅದು ಹೀಗಿರಬೇಕು ಎಂದು ನಾನು ಬಯಸುತ್ತೇನೆ.**

**ಒತ್ತಡದ ಸಂದರ್ಭಗಳು ಈಡೇರದ ನಿರೀಕ್ಷೆಗಳಿಗೆ ಕಾರಣವಾಗಬಹುದು, ನಾವು ಅದನ್ನು ಅರಿತುಕೊಳ್ಳದೆ ದುಃಖಿಸಲು ಮತ್ತು ದೂರು ನೀಡಲು ಕಾರಣವಾಗುತ್ತದೆ. ಈ ಒಂದು ಬೆಳವಣಿಗೆಯಲ್ಲಿ, ನಾವು ನಮ್ಮ ಸಂತೋಷ ಮತ್ತು ಶಾಂತಿಯನ್ನು ಕಳೆದುಕೊಳ್ಳುತ್ತೇವೆ. ಇದು ನನ್ನ ಸಹೋದರ, ಇದನ್ನು ದೇವರು ಸಹಿಸಿ ಕೊಳ್ಳುವುದಿಲ್ಲ.**



*A Pillar of Cloud and Fire*

ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟಾಗ ಇದನ್ನು ಅನುಭವಿಸಿದರು. 430 ವರ್ಷಗಳ ನಂತರ ಕರ್ತನಿಗೆ ಮೊರೆಯಿಟ್ಟರು. **ಅವರು ಹಗಲಿನಲ್ಲಿ ಮೇಘಸ್ತಂಭವೂ ಮತ್ತು ರಾತ್ರಿಯಲ್ಲಿ ಅಗ್ನಿಸ್ತಂಭವೂ ಸ್ತಂಭದೊಂದಿಗೆ ಆತನಿಂದ ನಡೆಸಲ್ಪಟ್ಟರು** (ವಿಮೋಚನ13:21). ಅವರು ಸಂತೋಷದಿಂದ ತುಂಬಿದರು ಮತ್ತು ಇಡೀ ಅಧ್ಯಾಯವು ಆತನ ನಾಮವನ್ನು ಮಹಿಮೆ ಪಡಿಸುವದಕ್ಕೆ ಸಮರ್ಪಣೆಯಾಗಿದೆ. ಅವರು ನಾಟ್ಯ ಮಾಡಿದರು, ಹಾಡಿದರು, ಸಂತೋಷಪಟ್ಟರು ಮತ್ತು ಸಂಭ್ರಮಿಸಿದರು.

ಜ್ಞಾಪಕ ಮಾಡಿಕೊಳ್ಳಿರಿ, ನೀವು ದೇವರ ಹತ್ತಿರ ಬಂದಾಗ, ಸೈತಾನನು ಅನೇಕ ಸವಾಲುಗಳನ್ನು ಮತ್ತು ನಿಮ್ಮ ದಾರಿಯಲ್ಲಿ ಅನೇಕ ಅಡೆತಡೆಗಳನ್ನು



*They started to complain*

ತರುವಂತಹನಾಗಿದ್ದಾನೆ, **ಅವರಿಗೆ ಮೂರು ದಿನಗಳು ನೀರು ದೊರೆಯದೆ ಇದ್ದಾಗ ಅವರು ಅನೇಕ ಸವಾಲುಗಳನ್ನು ಎದುರಿಸಿದರು** (ವಿಮೋಚನ 15:22). ಅವರು ಗುಣುಗುಟ್ಟುವದಕ್ಕೆ ಪ್ರಾರಂಭಿಸಿದರು. ದಾಸತ್ವದಲ್ಲಿರುವ ಅವರನ್ನು ಬಿಡಿಸಿದ್ದನ್ನು ಮರೆತು ದೇವರ ಒಳ್ಳೆಯತನವನ್ನು ಮರೆತುಬಿಟ್ಟರು. ಶಾಪ, ದಾಸತ್ವ, ಅವರಿಗೆ ಬಿಡುಗಡೆಯನ್ನು ತಂದಿತು. ನಾವು ಬಹಳ ಸುಲಭವಾಗಿ ದೇವರ ಒಳ್ಳೆಯತನವನ್ನು ಮರೆಯುವುದು ಬಹಳ ದುರದುಷ್ಟಕರವಾಗಿದೆ. ನಮಗೆ ಬಹಳ ಕಡಿಮೆ ಜ್ಞಾಪಕಶಕ್ತಿಯಿದೆ.

**ಅವರು ಗುಣುಗುಟ್ಟುವುದಕ್ಕೆ ಪ್ರಾರಂಭಿಸಿದರು** (ವಿಮೋಚನ 15:24). ಎಷ್ಟು ಸಾರಿ ನಾವು ಗುಣುಗುಟ್ಟಿದ್ದೇವೆ, ದೇವರ ಒಳ್ಳೆಯತನವನ್ನು ಮರೆತುಬಿಟ್ಟಿದೇವೆ. ಕೇವಲ ಅವರಿಗೆ ಮೂರು



*Twelve wells with seventy palms*

ದಿನಗಳು ಸಿಗದ ಇದ್ದ ಕಾರಣ ಮತ್ತು ಅವರ ಅಪೇಕ್ಷೆಗಳು ನೇರವೇರದ ಇದ್ದಾಗ, ಅದು ನಿರಾಶೆ

(8ನೇ ಪುಟಕ್ಕೆ)

NEHEMIAH BIBLE
EVENING COLLEGE
Chepauk & Santhoshapuram, Chennai.
Medium :Tamil
Registered Candidate for Membership
Asia Theological Association (ATA)
Recognised by International Christian Leaders &
Senior Pastors for the past 54 years
Certificate in Ministry
Diploma in Theology
Qualification : 10th Standard & above
Rush for admission!
Contact : The Chairman, Nehemiah Bible College.
10, MOHAMMED ABDULLAH 2ND STREET, BELLS ROAD, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

# PLEASE PRAY FOR OUR MINISTRIES AT THE HEAD QUARTERS

1. Prayer Service : 24 hours
2. **BIBLECOR -** Bible Correspondence Courses : English, Tamil & Hindi
3. **ECHO OF HIS CALL** - Monthly Magazines : English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
4. Nehemiah Bible Colleges (Three Centres) (Evening / Residential)
5. Theological Correspondence Courses: English & Tamil
6. Great Commission Partners (Network of Pastors)
7. Training Programmes
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools : 8.30 a.m. & 4.00 p.m. Sunday
13. **Tamil Services : 8.00 a.m. & 10.00 a.m. Sunday**
14. **Hindi Service : 4.00 p.m. Sunday**
15. **Telugu Service : 5.00 p.m. Sunday**
16. **English & Tamil Service : 6.00 p.m. Sunday**
17. Women's Prayer : 5.30 p.m. Wednesday
18. Men's Prayer : 7.00 p.m. Friday
19. Discipleship Meeting : 6.00 p.m. Saturday
20. House Meetings : 6.30 p.m. Tuesday & Thursday
21. Special Holy Communion : 6.00 a.m. 1st day of each month
22. Ministers Review Meeting : 5.30 p.m. First Saturday
23. Parents' Prayer : 4.00 p.m. First Sunday
24. Night Prayer : 9.30 p.m. Second Friday
25. Fasting Prayer : 9:30 a.m. Third Saturday
26. Holy Communion : Second Sunday Services
27. Youth / Kid Prayer : 10.00 p.m. daily
28. Staff Devotion : 9.00 a.m. daily
29. Office : 9.00 a.m. to 9.00 p.m. (except Sundays)

## Echo of His Call Postal Courses for candidates in India only

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a course book entitled **New Life – For You!** **After the completion of this course, you will get a certificate. There will be no compulsory fees. You will be blessed!**

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
**Echo of His Call, Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |




# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರೇ ಅರ್ಥವಾಗಲಿ" (ಮತ್ತಾಯ 24:15)



## ಚೆನ್ನೈನ ಬೆಳಕಿನ ಮನೆ!

## CHENNAI LIGHT HOUSE!

**ನಿಮ್ಮ ಜೀವಿತದಲ್ಲಿರುವ ಕತ್ತಲೆಯು ಅತಿಬೇಗನೆ ಹೊಳಪಾಗಿ ಮಾರ್ಪಡುವುದು!**

ಹಲವು ವರ್ಷಗಳ ಹಿಂದೆ, ನನ್ನ ಶುಶ್ರೂಷೆ ಯಲ್ಲಿರುವ ವಿವಿಧ ಭಾದೆಗಳಿಂದ ನಾನು ಬಹಳವಾಗಿ ಭಾದಿತನಾಗಿದ್ದೆ. ಆ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಸಮಸ್ಯೆಗಳು ಇದ್ದವು. ನಾನು ಈ ಜಗತ್ತಿನಲ್ಲಿ ಇತರ ಯಾವುದೇ ಮನುಷ್ಯನಂತೆ ಬದುಕಬಹುದಿತ್ತು ಮತ್ತು ಕರ್ತನ ಸೇವೆಯನ್ನು ಪ್ರವೇಶಬಾರದೆಂದು ನಾನು ಭಾವಿಸಿದೆ. ನಾನು ಹಾಗೆ ಮಾಡಿದ್ದರೆ, ನನ್ನ ಜೀವನದಲ್ಲಿ ಸಮಸ್ಯೆಗಳನ್ನು ಉಂಟು ಮಾಡಿದವರ ವಿರುದ್ಧ ನನ್ನದೇ ಆದ ರೀತಿಯಲ್ಲಿ ಮತ್ತು ಸ್ವಂತ ಶಕ್ತಿಯಿಂದ ಪ್ರತೀಕಾರ ತೀರಿಸಿಕೊಳ್ಳಬಹುದಿತ್ತು. ಇದಲ್ಲದೇ, ನನ್ನ ಹಣಕಾಸಿನ ಸಮಸ್ಯೆಗಳನ್ನು ಪರಿಹರಿಸಲು ನಾನು ಅಡ್ಡದಾರಿಗಳನ್ನು ತೆಗೆದು ಕೊಳ್ಳಬಹುದಿತ್ತು. ಕರ್ತನ ಸೇವಕನಾಗುವುದು ನನ್ನ ಸ್ವಂತ ಬಯಕೆಯೇ ಅಥವಾ ನನ್ನ ಜೀವನದಲ್ಲಿ ಇದು ನಿಜವಾಗಿಯೂ ದೇವರ ಕರೆಯೇ ಎಂದು ನಾನು ಆಶ್ಚರ್ಯ ಪಡುತ್ತೇನೆ.

ಇಂತಹ ಆಲೋಚನೆಗಳನ್ನು ನನ್ನ ಮನಸ್ಸಿನಲ್ಲಿ ಇಟ್ಟುಕೊಂಡು, ಚೆನ್ನೈನ ಮರಿನಾ ಸಮುದ್ರದಲ್ಲಿರುವ ಬೆಳಕಿನ ಮನೆಯ ಹತ್ತಿರ ಮೊಣಕಾಲೂರಿ ರಾತ್ರಿ 10 ಗಂಟೆಯವರಗೆ ಪ್ರಾರ್ಥನೆಯಲ್ಲಿ ಹೋರಾಡಿದೆನು. 1976ರ ಅ ರಾತ್ರಿಯಲ್ಲಿ, ಅ ಒಂದು ಸಂದಿಗ್ದ ಸಮಯದಲ್ಲಿ ನನಗೆ ಸಹಾಯ ಮಾಡುವದಕ್ಕೆ ಯಾರು ಇರಲಿಲ್ಲ. ಎಲ್ಲರೂ ನನ್ನನ್ನು ಕೈಬಿಟ್ಟರು. ನನ್ನ ಕಣ್ಣುಗಳು ಕೇವಲ ಬೆಳಕಿನ ಮನೆಯ ಕಡೆಗೆ ಕೇಂದ್ರಕೃತವಾಗಿದ್ದವು.

ದಡದ ಕಡೆಗೆ ಹಡಗುಗಳನ್ನು ಮಾರ್ಗದರ್ಶನ ಮಾಡಲು ನಿರ್ದಿಷ್ಟ ವೇಗದಲ್ಲಿ ತಿರುಗುಂತೆ ಬೆಳಕನ್ನು ವಿನ್ಯಾಸಗೊಳಿಸಲಾಗಿದೆ. ತಿರುಗುವ ಬೆಳಕನ್ನು ಗಮನಿಸುತ್ತಿರುವಾಗ, ಅದು ಸರಿಸುಮಾರು 15 ಸೆಂಕಡುಗಳ ಕಾಲ ಪ್ರಕಾಶಮಾನವಾಗಿ ಹೊಳೆಯುತ್ತದೆ ಮತ್ತು ಮುಂದಿನ 10 ಸೆಂಕಡುಗಳ ಕಾಲ ಮಂದವಾಗಿ ಮತ್ತು ಕಪ್ಪಾಗುತ್ತದೆ ಎಂದು ನಾನು ಗಮನಿಸಿದೆ.



ನಾನು ಬೆಳಕು ಮತ್ತು ಕತ್ತಲೆಯ ಈ ಪರ್ಯಾಯ ಮಾದರಿಯನ್ನು ಗಮನಿಸುವುದನ್ನು ಮುಂದುವರಿಸಿದಾಗ, ನಾನು ಹೊಸ ದೃಷ್ಟಿಕೋನವನ್ನು ಪಡೆದು ಕೊಂಡೆ ಮತ್ತು ಪ್ರೋತ್ಸಾಹ ಗೊಂಡೆನು. ಇದರ ಜೊತೆಗೆ, ನಾನು ದೇವರಿಂದ ಒಂದು ಸ್ಪಷ್ಟಸಂದೇಶ ವನ್ನು ಪಡೆದು ಕೊಂಡೆನು. ಅದು ಈ ರೀತಿಯಾಗಿ ಇತ್ತು, ನಿನ್ನ ಜೀವಿತದಲ್ಲಿರುವ ಕತ್ತಲೆಯು ಅತಿಬೇಗನೆ ಹೊಳಪಾಗಿ ಮಾರ್ಪಡುವುದು!

ಪ್ರೀತಿಯ ಓದುಗರೇ, ನೀವು ದೊಡ್ಡ ಅಪಾಯದಲ್ಲಿ ಸಿಲುಕಿದ್ದೀರಾ ಅಥವಾ ನೀವು ಭಯಾನಕ ಸಂಬಂಧವನ್ನು ಎದುರಿಸುತ್ತಿದ್ದೀರಾ? ನಿರಶೆಗೊಳ್ಳಬೇಡಿ. ಬೆಳಕು ಮತ್ತು ಕತ್ತಲೆ ಬಂದು ಹೋಗುತ್ತವೆ. ಆದರೆ ಎಲ್ಲಾ ಸಮಯಗಳಲ್ಲಿ ಕರ್ತನಾದ ಯೇಸಕ್ರಿಸ್ತನು ನಿರಂತರವಾಗಿ ಸ್ಥಿರವಾಗಿರುತ್ತಾನೆ. ಆತನು ನಿನ್ನೆ ಇದ್ದ ಹಾಗೆ, ಈ ಹೊತ್ತು, ನಿರಂತರವಾಗಿ ಇರುತ್ತಾನೆ. ನಮ್ಮ ಮುಂಚಿನ ತಂದೆಗಳು, ಅಬ್ರಹಾಮ, ಇಸಾಕನ ದೇವರು ನಿಮ್ಮನ್ನು ತನ್ನ ಕೈಯಲ್ಲಿ ಇಡಿದು ಕೊಳ್ಳುವನು. ನಿಮ್ಮನ್ನು ಸಂರಕ್ಷಿಸಿ ಕಾಪಾಡುವನು.

ಆತನಲ್ಲಿ ನಂಬಿಕೆ ಮಾತ್ರ ಇರಲಿ!!

★ ★ ★

*(6ನೇ ಪುಟದಿಂದ)*

ಯನ್ನು ತಂದಿತು. ನಿರಾಶೆಯು ನಮ್ಮ ಶಾಂತಿ ಮತ್ತು ಸಂತೋಷವನ್ನು ಕದ್ದುಕೊಳ್ಳುತ್ತದೆ. ಆದರೆ ನಮ್ಮ ಆಲೋಚನೆಗಳಿಂತ ದೇವರು ಅಲೋಚನೆಗಳು ದೊಡ್ಡವು ಆಗಿವೆ. ಅವರ ದೂರುಗಳ ಹೊರತಾಗಿ, **ದೇವರು ಅವರಿಗೆ ಕೇವಲ ಒಂದು ಒರತೆಯನ್ನು ಸಿದ್ದಮಾಡದೆ, ಆದರೆ ಹನ್ನೆರಡು ಒರತೆಗಳನ್ನು ಇಸ್ರಾಯೇಲ್ಯರಿ ಗೋಸ್ಕರ ಸಿದ್ದ ಮಾಡಿದನು.**

ನಾನು ಯೋಚನೆ ಮಾಡುತ್ತಾನೆ ಒಂದು ಕುಲಕ್ಕೆ ಒಂದರಂತೆ, ದೇವರು ಅವರ ನಡುವೆ ವಿವಾದಗಳ ಸಾಧ್ಯತೆಯನ್ನು ಮುಂಗಾಣಿಸಿದನು ಮತ್ತು ಹೇರಳವಾಗಿ ಒದಗಿಸಿದನು ಆದ್ದರಿಂದ ಅವರು ನೀರಿನ ಮೂಲಕ ಕ್ಯಾಂಪ್ ಮಾಡಲು ಸಾಧ್ಯವಾಯಿತು.

ನಾವು ಸತ್ಯವೇದದಲ್ಲಿ ನೋಡುವಾಗ, ಎಲ್ಲ ದೊಡ್ಡ ದೇವರ ಮಕ್ಕಳು ನಿರಾಶೆಯಿಂದ ಹಾದು ಹೋಗುವುದನ್ನು ನಾವು ನೋಡುತ್ತೇವೆ. ಅಬ್ರಹಾಂಮ, ನೋಹ, ಯಾಕೋಬ, ಸಮವೇಲ. ಎಲಿ, ಹನ್ನ ಯೆರಮೀಯ,ದಾವಿದ ಯೋಬ, ನೆಹಮೀಯ, ಪೇತ್ರ, ಪೌಲ ಮತ್ತು ದೇವರ ರಾಜ್ಯದಲ್ಲಿ ಅನೇಕ ಹೆಚ್ಚು ಶಕ್ತಿಶಾಲಿ ವ್ಯಕ್ತಿಗಳು ಎಲ್ಲಾ ನಿರಾಶೆಗಳು ಮತ್ತು ಭಗ್ನತೆಯನ್ನು ಅನುಭವಿಸಿದರು. ಈ ಪ್ರಯೋಗಗಳ ಮೂಲಕ ಅವರ ನಂಬಿಕೆಯನ್ನು ಪರೀಕ್ಷಿಸಲಾಯಿತು ಮತ್ತು ಸಂಸ್ಕರಿಸಲಾಯಿತು, ಅಂತಿಮವಾಗಿ ಬೆಳವಣಿಗೆ ಮತ್ತು ದೇವರ ಮೇಲೆ ಆಳವಾದ ಅವಲಂಬನೆಗೆ ಕಾರಣವಾಯಿತು. ಆದರೆ ಅವರ ನಿರಾಶೆಗಳ ಮಧ್ಯದಲ್ಲಿ, ದೇವರು ತನ್ನ ಯೋಜನೆಯನ್ನು ಪೂರ್ಣಗೊಳಿಸಿದನು. ಈ ವರ್ಷವು ಕೂಡ ನಿಮ್ಮ ಜೀವಿತದಲ್ಲಿ ಆತನು ಮಾಡಲು ಶಕ್ತನಾಗಿದ್ದಾನೆ. ದೇವರಿಗೆ ಯೋಜನೆ ಇದೆ, ನಿಮ್ಮ ನಿರಾಶೆ ಮತ್ತು ಭಗ್ನತೆಯ ಮಧ್ಯದಲ್ಲಿ ಆತನು ಯೋಜನೆಯನ್ನು ಪರಿ ಪೂರ್ಣ ಗೊಳಿಸುವನು. ನೀವು ಈ ಹೊತ್ತು ನಿರಾಶೆಗೆ ಒಳಗಾಗಿದ್ದೀರಾ? ನೀವು ಭಗ್ನತೆಗೆ ಒಳಗಾಗಿದ್ದೀರಾ? ಆರಾಮು ನಿಶ್ಚಿಯವಾಗಿದೆ. ದೇವರು ಪರದೆಯ ಒಳಗಡೆ ಕಾರ್ಯಮಾಡುತ್ತಾ ಇದ್ದಾನೆ. ನೀರಿಕ್ಷೆಯನ್ನು ಬಿಟ್ಟು ಕೊಡಬೇಡಿರಿ. ಆತನು ನಮ್ಮನ್ನು ತನ್ನ ಅಂಗೈಯಲ್ಲಿ ಚಿತ್ರಿಸಿ ಕೊಂಡಿದ್ದಾನೆ. ಆತನು ನಿಮ್ಮನ್ನು ಮರೆಯುವುದಿಲ್ಲ. ನಿಮ್ಮ ಜೀವಿತದಲ್ಲಿ ಯಾವುದನ್ನು ಆತನು ಪ್ರಾರಂಭ ಮಾಡಿದ್ದಾನೋ ಅದನ್ನು ಆತನು ಪೂರ್ಣ ಗೊಳಿಸುವನು.

## 3. ನಿರುತ್ಸಾಹ !

ನಮ್ಮ ಜೀವನದಲ್ಲಿ ದೇವರ ಒಳ್ಳೆಯತನವನ್ನು ಕದಿಯಲು ಸೈತಾನನು ಬಳಸುವ ಮೂರನೇಯ ಅಸ್ತ್ರವೆಂದರೆ ನಿರುತ್ಸಾಹ.

ಅವರು ಯೇಸುವಿಗೆ ದೂರು ನೀಡಿದಾಗ ಮಾರ್ಥ ಮತ್ತು ಮರಿಯಳು ಕಥೆಯಲ್ಲಿ ನಾವು ಇದರ ಉದಾಹರಣೆಯನ್ನು ನೋಡುತ್ತೇವೆ. **ಸ್ವಾಮಿ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ ಅಂದಳು** (ಯೋಹಾನ 11:32). ಕೆಲವು ಸಮಯಗಳಲ್ಲಿ ದೇವರು ನಮ್ಮ ಜೀವಿತದಲ್ಲಿ ಸೋಲುಗಳಿಗೆ ಅಪ್ಪಣೆಕೊಡುತ್ತಾನೆ. ನಮ್ಮ ಪ್ರೀಯವಾದವರನ್ನು ಕಳೆದುಕೊಳ್ಳುವುದು. ಕೆಲವರು ನಮ್ಮಲ್ಲಿ ಕಳೆದ ವರ್ಷ ಇಂತಹ ಪರಿಸ್ಥಿತಿಯನ್ನು ಹಾದುಹೋಗಿರಬಹುದು. ಅದು ನಂಬಲಾಗದ ನಿರುತ್ಸಾಹವಾಗಿರಬಹುದು. ಯಾಕೆ ದೇವರು ಮಧ್ಯಸ್ಥಿಕೆಯನ್ನು ವಹಿಸಲಿಲ್ಲ ಎಂದು ನಾವು ಪ್ರಶ್ನೆ ಮಾಡುತ್ತೇವೆ. ಯಾಕೆ ಆತನು ನನ್ನ ಪ್ರಾರ್ಥನೆಯನ್ನು ಕೇಳಲಿಲ್ಲ.ಏನೇಹಾಗಲಿ ಸತ್ಯವೇದವು ನಮಗೆ ಜ್ಞಾಪಕಪಡಿಸುತ್ತದೆ. **ಯೇಸು ಕಣ್ಣೀರಿಟ್ಟನು.** ಯೋಹಾನ 11:35. ನಮ್ಮ ನೋವು, ಕಣ್ಣೀರು ಮತ್ತು ನಿರುತ್ಸಾಹವನ್ನು ಅರ್ಥಮಾಡಿಕೊಳ್ಳುವ ಮಹಾಯಾಜಕನು ನಮಗೆ ಇದ್ದಾನೆ. **ಯಾಕೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪ ವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನಗೆ ಗುರಿಯಾದನು, ಪಾಪಮಾತ್ರ ಮಾಡಲಿಲ್ಲ.** ಇಬ್ರಿಯ 4:15.

ನೀವು ಅಳುವಾಗ ಯೇಸುಕ್ರಿಸ್ತನು ಅಳುತ್ತಾನೆ. ಅದೇ ನೋವು ಅತನು ಅನುಭವಿಸುತ್ತಾನೆ, ಆತನು ನಿಮ್ಮ ಸಮಸ್ಯೆಗಳ ಮಧ್ಯದಲ್ಲಿ ಇದ್ದಾನೆ ಯಾಕೆಂದರೆ ಅದು ನಂಬಿಕೆಯನ್ನು ಉತ್ಪತ್ತಿ ಮಾಡುತ್ತದೆ ಎಂದು ಆತನಿಗೆ ಗೊತ್ತು. ದೇವರು ಬೇಥನಿಗೆ ಬರುವದನ್ನು ತಡಮಾಡಿದನು ಯಾಕೆಂದರೆ ನಮ್ಮ ನಂಬಿಕೆಯನ್ನು ಶಕ್ತಗೊಳಿಸುವದಕ್ಕಾಗಿ. ಆತನು ನಮ್ಮ ಜೀವಿತಕ್ಕೆ ಲೇಖಕನು ಆಗಿದ್ದಾನೆ. ಆತನು ಘೋಷಿಸುತ್ತಾನೆ. **ನಾನೇ ಪುನುರುತ್ಥಾನವು ಮತ್ತು ಜೀವವು ಆಗಿದ್ದೇನೆ.** ಯೋಹಾನ 11:25. ಈ ಸತ್ಯವನ್ನು ತೋರ್ಪಡಿಸುವದಕ್ಕೆ ಯಾರೋ ಸಾಯಬೇಕಾಗಿತ್ತು. ಸಹೋದರ, ಸ್ನೇಹಿತ, ಮಗ, ಗಂಡ, ತಂದೆ, ಅದ್ದರಿಂದ ಆತನು ನಮಗೆ ಪರಿಶ್ರಮವನ್ನು ಕಲಿಸುವದಕ್ಕಾಗಿ.

ಸತ್ಯವೇದವು ನಮಗೆ ಪ್ರೋತ್ಸಾಹಮಾಡುತ್ತದೆ. ನನ್ನ ಸಹೋದರರೇ, **ನಿಮ್ಮ ನಂಬಿಕೆಗೆ ಅಗುವ ಪರಿಶೋಧನೆಯು ತಾಳ್ಮೆಯನ್ನುಂಟು ಮಾಡುತ್ತದೆಂದು ತಿಳಿದು ನೀವು ನಾನಾವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ** (ಯಾಕೋಬ 1:2-3). ನಾವು ನಮ್ಮ ನಂಬಿಕೆಯನ್ನು ಬಿಟ್ಟುಕೊಡಬಾರದು. ನಾವು ಬಿಟ್ಟುಕೊಡುವವರಲ್ಲ!

ಈ ವರ್ಷ, ನೀವು ಹಿಂದೆ ಬಿಟ್ಟುಕೊಟ್ಟಿದ್ದನ್ನು ಪ್ರಾರಂಭಿಸಲು ದೇವರು ನಿಮಗೆ ಅನುವು



*Martha and Mary complained to Jesus Christ!*

ಮಾಡಿಕೊಡುತ್ತಾನೆ. ಇದು ಕಟ್ಟುವ ವರ್ಷವಾಗಿರಲಿ, ನೀವು ಮುಗಿಯುವುದನ್ನು ನೋಡಿ ಮತ್ತು ಯಾವುದೇ ಮುಗಿಯದೆ ಇರುವುದನ್ನು ನೀವು ನೋಡುತ್ತೀರಿ. ನಿಮ್ಮ ಸಮಸ್ಯೆಗಳ, ಸೋಲುವಿಕೆಗಳ, ನಾಚಿಕೆ ಮತ್ತು ನಿರಾಶೆಗಳ ನಡುವೆ ಆತನು ಜೊತೆಯಲ್ಲಿ ನಡೆದಾಡುತ್ತಾನೆ. ಬೆಂಕಿಯಲ್ಲಿ ನಿಮ್ಮ ಜೊತೆಯಲ್ಲಿ ನಡೆಯುವ 4ನೆಯ ಮನುಷ್ಯನು ಆತನು ಆಗಿದ್ದಾನೆ. ನಿಮ್ಮ ಪರಿಶ್ರಮದ ಫಲಗಳನ್ನು ಈ ವರ್ಷ ನೀವು ನೋಡುತ್ತೀರಿ.

ಅದ್ದರಿಂದ, ಸಹೋದರ ಸಹೋದರಿಯರೇ, ನಿವು ಸಮಸ್ಯೆಗಳ, ನಿರುತ್ಸಾಹವನ್ನು ಹಾದು ಹೋಗುವಾಗ, ನಿಮ್ಮ ಶಾಂತಿ ಮತ್ತು ಸಂತೋಷವನ್ನು ನಿಮ್ಮಿಂದ ತೆಗೆಯುವಾಗ, ನೀವು ಯೋಜನೆ ಮಾಡಿದಾಗ ಹಾಗೆ ಹೋಗದೆ ಇರುವಾಗ. ಇದು ಪರಿಶುದ್ಧ ಸಂತೋಷವೆಂದು ಜ್ಞಾಪಕಮಾಡಿಕೊಳ್ಳಿರಿ. ಇದು ನಮಗೆ ಸತ್ಯವೇದವು ಕಲಿಸುತ್ತದೆ.ನಮ್ಮ ಎಲ್ಲಾ ಸಮಸ್ಯೆಗಳ ನಡುವೆ ಹಾದುಹೋಗುವ ಮಹಾಯಾಜಕನು ನಮಗೆ ಇದ್ದಾನೆ. ನಿಮ್ಮ ಪಕ್ಕದಲ್ಲಿ ಇನ್ನೊಂದು ಬೆಂಕಿಯು ನನ್ನ ಸಂಗಡ ಮತ್ತು ನಿನ್ನ ಸಂಗಡ ನಿಂತುಕೊಂಡರು. ದೇವರ ಒಳ್ಳೆಯತನವು ಎಲ್ಲದರ ಮಧ್ಯೆ ಶಾಂತಿ ಮತ್ತು ಸಂತೋಷವನ್ನು ತರುತ್ತದೆ ಯಾಕೆಂದರೆ ಆತನು ಶಾಂತಿಯ ರಾಜ ಕುಮಾರನಾಗಿದ್ದಾನೆ.

ನೀವು ಏಕಾಂಗಿ ಅಲ್ಲ, ನೀವು ಏಕಾಂಗಿ ಎದುರಿಸಬೇಕಾಗಿಲ್ಲ.

ಬಿಟ್ಟುಕೊಡಬೇಡಿರಿ, ಪರಿಶ್ರಮ ಮತ್ತು ನೀವು ಎಲ್ಲಿ ಬಿದ್ದುಹೋಗಿದ್ದೀರಿ ಅಲ್ಲಿಂದಲೇ ಎದ್ದೇಳಿ.

ಸೈತಾನನು ಸುಳ್ಳು ಹೇಳುವವನಾಗಿದ್ದಾನೆ. ಆದರೆ ಕೇಳಿಸಿಕೊಳ್ಳಬೇಡಿರಿ. ದೇವರಿಗೆ ಗೊತ್ತು ಮತ್ತು ಆತನು ಅಪ್ಪಣೆಕೊಡುತ್ತಾನೆ!

**********


## URGENT NEED

### VICE PRINCIPAL
for

**ST. PAUL'S MATRICULATION SCHOOL,**
An *Echo of His Call* Institution
Vijayanagaram, Medavakkam,
Chennai - 100.

We need well qualified, experienced, dedicated, hard working and mission oriented Christian.

Apply with Bio-data to
E.mail: sam@echoofhiscall.org
WhatsApp: (+91) 98412 71858



## URGENT

We require approximately 1000 Hindi Christian books for **our Nehemiah Bible Colleges**. Kindly inform us about the possibility of obtaining theological Hindi books.

- Pr. S. Sam Selva Raj, Editor
+91-98412 71858



## WANTED for

### NEHEMIAH BIBLE COLLEGE
of ECHO OF HIS CALL, Chennai
(ATA Candidate)

1. **DEAN (Residential):** Hindi Theologian with M.Div. / M.Th. Degree & experience.
2. **VICE-PRINCIPAL:** English / Tamil / Hindi Theologian with M.Div. / M.Th. & experience.
3. **CO-ORDINATOR:** With Computer / Typing knowledge in English, Tamil & Hindi.

Eligible candidates may send bio--data to:
E.mail: sam@echoofhiscall.org
WhatsApp: (+91) 98410 71858



## NEED LIBRARY BOOKS

We are in need of **Tamil, English and Hindi books** for our Libraries at **St. Paul's Matriculation School and Nehemiah Bible Colleges.** If you have new or old books in good condition and if you are willing to donate, please get in touch with us.

- Pr. S. Sam Selva Raj, Editor
+91-98412 71858

RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**

Please subscribe

Kindly view and subscribe our **Echo of His Call YouTube Channel** when you get time. Thanks. - Editor

## OUR BANK DETAILS:

***1. Bank : State Bank of India***

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

***2. Bank : ICICI Bank***

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

***3. Bank : State Bank of India***

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps **(Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.)** to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/24-26**
**WPP NO. TN/PMG(CCR)/WPP- 219/24-26**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th JANUARY 2024**

**If un-delivered please return to:**

**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

***GOD BLESS YOU!***

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**